CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1690/2022

ಸಾಕ್ಷಿಯನ್ನು ದಿಃ26.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಸದರಿ ಘಟನೆಯ ಸಂದರ್ಭದಲ್ಲಿ ನನಗೆ 21 ವರ್ಷವಾಗಿತ್ತು. ಆ ಸಮಯದಲ್ಲಿ ನನ್ನ ಬಳಿ ಡಿ ಎಲ್ ಇರುತ್ತದೆ. ಸದರಿ ದಾಖಲೆಯನ್ನು ನಾನು ತನಿಖಾಧಿಕಾರಿಗೆ ಕೊಟ್ಟಿರುತ್ತೇನೆ. ಸದರಿ ದಿನ ನಾನು ಓಡಿಸುತ್ತಿದ್ದ ವಾಹನದ ಮಾಲೀಕ ನಾನು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಅದು ನನ್ನ ತಾತನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ಅಜ್ಜಿಗೆ ಆ ಸಮಯದಲ್ಲಿ ಸರಿ ಸುಮಾರು 50 ವರ್ಷಗಳ ಮೇಲಾಗಿತ್ತು. ಸದರಿ ಅಪಘಾತವಾದ ಸ್ಥಳ 4 ರಸ್ತೆ ಸೇರುವ plus ಆಕಾರದ ರಸ್ತೆ ಎಂದರೆ ಸರಿ. ಕನಕಪುರದಿಂದ ಮಹಾರಾಜಕಟ್ಟೆಗೆ ಸಾಗುವ ರಸ್ತೆ ಮುಖ್ಯರಸ್ತೆ ಎಂದರೆ ಸಾಕ್ಷಿಯು ಬೈಪಾಸ್ ರಸ್ತೆಯಿಂದ ಬಸವೇಶ್ವರ ನಗರಕ್ಕೆ ಸಾಗುವ ರಸ್ತೆ ಎಂದು ನುಡಿಯುತ್ತಾರೆ. ಅದು ಕೇವಲ ಒಂದೇ ಮುಖ್ಯ ರಸ್ತೆ ಇರುತ್ತದೆಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಹೊರತು ಪಡಿಸಿ ಬಲಭಾಗದಲ್ಲಿ ಒಂದು ರಸ್ತೆ ಹೋಗುತ್ತದೆಂದು ನುಡಿಯುತ್ತಾರೆ. ಅದು ಮುಖ್ಯರಸ್ತೆ ಅಲ್ಲ ಎಂದರೆ ಸಾಕ್ಷಿಯು ಅದು ಮುಂಚೆ ಮುಖ್ಯರಸ್ತೆಯಾಗಿದ್ದು ಈಗ ಬೈಪಾಸ್ ರಸ್ತೆಯಾಗಿರುವ ಕಾರಣ ಮುಖ್ಯರಸ್ತೆ ಅಲ್ಲ ಎಂದು ನುಡಿಯುತ್ತಾರೆ.

ಬಸವೇಶ್ವರ ನಗರದಿಂದ ಬೃಂದಾವನ ನಗರಕ್ಕೆ ಸಾಗುವ ರಸ್ತೆ ಮುಖ್ಯರಸ್ತೆ ಅಲ್ಲ ಅದು shortcut ಆಗಿರುತ್ತದೆ. ರಸ್ತೆ ನಿಯಾಮಾವಳಿಯನ್ನು ಪಾಲಿಸದೇ ನಾನು ಮುಖ್ಯರಸ್ತೆಯನ್ನು ಬಳಸದೇ shortcut ನಲ್ಲಿ ಹೋಗಲು ಪ್ರಯತ್ನ ಮಾಡಿದ ಕಾರಣ ನನ್ನ ತಪ್ಪಿ ನಿಂದ ಅಪಘಾತವಾಗಿರುತ್ತದೆಂದರೆ ಸರಿಯಲ್ಲ. ಸದರಿ ದಿನ ನಾನು ಹಾಗೂ ನನ್ನ ಅಜ್ಜಿ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ನಿಪಿ-1 ನ್ನು ನಾನು

ಬರೆದಿರುವುದಿಲ್ಲ ಸದರಿ ಬರೆದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆಂದರೆ ಸಾಕ್ಷಿಯು ಹೌದು ವಕೀಲರು ಬರೆದಿರುತ್ತಾರೆಂದು ನುಡಿಯುತ್ತಾರೆ.

ಸದರಿ ದೂರನ್ನು ಮೃತ ಗೌರಮ್ಮ ರವರಿಗೆ ವಿಮೆ ಹಣ ಬರಲಿ ಎಂಬ ಉದ್ದೇಶಕ್ಕೆ ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ 4 ರಸ್ತೆ ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ-3 ನ್ನು ಮಹಾರಾಜಕಟ್ಟೆ ಮುಖ್ಯರಸ್ತೆಯಲ್ಲಿ ತೆಗೆದಿರುವುದಿಲ್ಲ ಅದನ್ನು ಬಸವೇಶ್ವರ ನಗರದಿಂದ ಬೃಂದಾವನ ನಗರಕ್ಕೆ ಹೋಗುವ ರಸ್ತೆಯಲ್ಲಿ ತೆಗೆಯಲಾಗಿದೆ ಎಂದರೆ ಸರಿ. ನನಗೆ ಸದರಿ ಅಪಘಾತ ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಸದರಿ ದಿನ ನನಗೆ ಗಾಯಗಳಾಗಿರುವುದಾಗಿ ಹೇಳಿದ್ದು ನಾನು ಈ ಸಂಬಂಧ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ ಆದರೆ ಚಿಕಿತ್ಸೆ ಪಡೆದುಕೊಂಡಿದ್ದು ಅದರ ಬಿಲ್ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹೇಳಿಕೆಯಲ್ಲಿ ನಾನು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆಂದು ಹೇಳಿರುವುದಿಲ್ಲ. ಘಟನಾ ಸಮಯದಲ್ಲಿ ನನಗೆ 19 ವರ್ಷವಾಗಿದ್ದು 21 ವರ್ಷ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

23ನೇ ತಾರೀಖು ವಾಹನವನ್ನು ಅಮಾನತು ಪಡಿಸಿಕೊಂಡಿದ್ದು ನನಗೆ ಸ್ಥಳ ಮತ್ತು ಚಕ್ಕುಬಂದಿ ಹೇಳಲಾಗುವುದಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆಂದು ನೆನಪಿಲ್ಲ. ಸ್ಥಳ ಪಂಚನಾಮೆಗೆ ನನ್ನ ಜೊತೆ ಸಾರ್ವಜನಿಕರು ಸಹಿ ಮಾಡಿದ್ದು ಯಾರೆಂದು ಗೊತ್ತಿರುವುದಿಲ್ಲ. ಸದರಿ ಅಪಘಾತವೂ ನನ್ನ ವೇಗದ ಹಾಗೂ ಅಜಾಗರೂಕತೆಯ ಚಾಲನೆಯಿಂದ ಆಗಿದ್ದು ಆರೋಪಿಯ ತಪ್ಪು ಇರುವುದಿಲ್ಲ ಆದರೂ ಪರಿಹಾರ ಬರಲಿ ಎಂದು ಉದ್ದೇಶಕ್ಕೆ ಸುಳ್ಳು ದಾಖಲೆ ಕೊಟ್ಟು ಸುಳ್ಳು ಸಾಕ್ಷ್ಯ ನಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ದಿನ ಆರೋಪಿಯೇ ನನ್ನ ಹಾಗೂ ನನ್ನ ಅಜ್ಜಿಯನ್ನು ಕನಕ ನರ್ಸಿಂಗ್ ಹೋಂ ಇಲ್ಲಿಗೆ ಚಿಕಿತ್ಸೆ ಕೊಡಿಸಲು ಕರೆದುಕೊಂಡು ಹೋದರು ಎಂದರೆ ಸಾಕ್ಷಿಯು ಸಾರ್ಜನಿಕರ ಒತ್ತಾಯದ ಮೇರೆಗೆ ಕರೆದುಕೊಂಡು ಹೋದರು ಎಂದು ನುಡಿಯುತ್ತಾರೆ. ಆರೋಪಿಯೇ ಸ್ವಯಂ ಚಿಕಿತ್ಸೆ ಕೊಡಿಸಿದರೂ ಸಹ

ಆತ ವಾಹನ ನಿಲ್ಲಿಸದೇ ಪರಾರಿಯಾಗಿರುತ್ತಾನೆಂದು ದೂರಿನಲ್ಲಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗೌರಮ್ಮ ರವರಿಗೆ ವಯೋ ಸಹಜ ಗಾಯಗಳಾಗಿದ್ದು ನನ್ನ ತಪ್ಪಿ ನಿಂದ ಅಪಘಾತವಾದ ಸಮಯದಲ್ಲಿ ಅವರಿಗೆ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**